ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರದ ಆದೇಶ ಸಂಖ್ಯೆ: ನಅಇ 206 ಎಂಎಸ್‌ಪೈ 2022 (ಇ), ದಿನಾಂಕ: 18-05-2022 ರನ್ವಯ ಮಾನ್ಯ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ" ಯಡಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ "Package-04 (Consists of 3 works)" (ಕ್ರಮ ಸಂಖ್ಯೆ: 15, 16 ಮತ್ತು 17) ಪ್ಯಾಕೇಜಿನ ಕಾಮಗಾರಿಯ ರೂ.9.00 ಕೋಟಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್‌ಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎಸ್‌ಪೈ 2021(ಇ), ದಿನಾಂಕ: 14-01-2022.
2. ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎಸ್‌ಪೈ 2021(ಇ), ದಿನಾಂಕ: 25-02-2022 (5).
3. ಸರ್ಕಾರದ ಆದೇಶ ಸಂಖ್ಯೆ: ನಅಇ 206 ಎಂಎಸ್‌ಪೈ 2022(ಇ), ದಿನಾಂಕ: 18-05-2022.
4. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಮು.ಆ./ಪಿ.ಆರ್/81/2022-23, ದಿನಾಂಕ: 11-08-2022.
5. ದಿನಾಂಕ: 20-08-2022 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿ.

* * * * *

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 14-01-2022ರ ಆದೇಶದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಸಂದರ್ಭದಲ್ಲಿ ಘೋಷಿಸಿದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ ರೂ.6000.00 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳುವ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಗೆ ಸರ್ಕಾರದ ತಾತ್ವಿಕ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 25-02-2022 (5) ರ ಆದೇಶದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎಸ್‌ಪೈ 2021(ಇ), ದಿನಾಂಕ: 14-01-2022 ರಂತೆ ಅನುಮೋದಿಸಲಾಗಿರುವ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಗೆ ಸಂಬಂಧಿಸಿದಂತೆ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರಕ್ಕೆ ರೂ.75.00 ಕೋಟಿಗಳ ಅನುದಾನ ನಿಗಧಿಪಡಿಸಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ: 18-05-2022ರ ಆದೇಶದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎಸ್‌ಪೈ 2021 (ಇ), ದಿನಾಂಕ: 25-02-2022 (5) ರಂತೆ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಯಡಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರಕ್ಕೆ ನಿಗಧಿಪಡಿಸಿದ್ದ ರೂ.75.00 ಕೋಟಿಗಳ ಅಂದಾಜು ಮೊತ್ತದ ಕಾಮಗಾರಿಗಳ ಕ್ರಿಯಾಯೋಜನೆ ಪಟ್ಟಿಗೆ ಕೆಲವು ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಿ ಆದೇಶಿಸಲಾಗಿದ್ದು, ಸದರಿ ಆದೇಶದ ಕ್ರಮ ಸಂಖ್ಯೆ: 15, 16 ಮತ್ತು 17ರ ಒಟ್ಟು 03 ಕಾಮಗಾರಿಗಳಿಗೆ ರೂ.9.00 ಕೋಟಿಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

. . .2/-

Scanned by CamScanner

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ದಿನಾಂಕ: 11-08-2022ರ ಪತ್ರದಲ್ಲಿ, ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಸರ್ಕಾರವು 2022-23ನೇ ಸಾಲಿನ "ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ"ಯಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ನಂ-09 ರಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಪತ್ರದ ಸಂಖ್ಯೆ: ನಅಇ 206 ಎಂಎನ್‌ವೈ 2022(ಇ) ಬೆಂಗಳೂರು, ದಿನಾಂಕ: 18-05-2022 ರಂತೆ ಅನುಮೋದನೆಗೊಂಡಿರುವ ಕಾಮಗಾರಿಗಳ ಕ್ರಮ ಸಂಖ್ಯೆ: 15, 16 ಮತ್ತು 17ರ ಕಾಮಗಾರಿಗಳಿಗೆ ದಿನಾಂಕ: 04-07-2022 ರಂದು ದ್ವಿ-ಲಕೋಟೆ E-Procurement ಪದ್ಧತಿಯಲ್ಲಿ ರೂ.787.29 ಲಕ್ಷಗಳಿಗೆ (ಟೆಂಡರ್‌ಗಿಟ್ಟ ಮೊತ್ತ) ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ: 27-07-2022 ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಬಿಡ್‌ದಾರರು ಭಾಗವಹಿಸಿದ್ದು, ಇಬ್ಬರೂ ಬಿಡ್‌ದಾರರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆಂದು ಮುಖ್ಯ ಆಯುಕ್ತರು, ಬಿಬಿಎಂಪಿ ರವರು ತಿಳಿಸಿರುತ್ತಾರೆ.

ಬಿಡ್‌ದಾರರಾದ 1) C.R. GIRISH (RAM AND COMPANY) ಮತ್ತು 2) Chidananda Murthy R ರವರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದರಿಂದ ದಿನಾಂಕ: 03-08-2022 ರಂದು ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿರುವ ತಾಂತ್ರಿಕ ಮೌಲ್ಯಮಾಪನ ಸಮಿತಿಯು ತಾಂತ್ರಿಕ ಬಿಡ್‌ಗೆ ಅನುಮೋದನೆ ಹಾಗೂ ಆರ್ಥಿಕ ಬಿಡ್‌ನ್ನು ತೆರೆಯಲು ಅನುಮೋದನೆ ನೀಡಿರುವಂತೆ ದಿನಾಂಕ: 04-08-2022 ರಂದು ಆರ್ಥಿಕ ಬಿಡ್‌ಅನ್ನು ತೆರೆಯಲಾಗಿದ್ದು, ವಿವರ ಈ ಕೆಳಕಂಡಂತಿದೆ ಎಂದು ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ., ರವರು ತಿಳಿಸಿರುತ್ತಾರೆ.

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್‌ಗಿಟ್ಟ ಮೊತ್ತ 2021-22ರ ಅನುಮೋದಿತ ದರಗಳಿಗೆ ಹೊಲಿಸಿದಾಗ	ಟೆಂಡರ್‌ಗಿಟ್ಟ ಮೊತ್ತ 07-07-2022 ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ	ಗುತ್ತಿಗೆದಾರರು ನಮೂದಿಸಿರುವ ದರಗಳು	2021-22ನೇ ಸಾಲಿನ ಎಸ್.ಆರ್ ದರಗಳಿಗೆ ಹೋಲಿಸಿದಾಗ ಶೇಕಡವಾರು	ದಿನಾಂಕ: 07-07-2022 ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡ	ಷರಾ
01	Chidananda Murthy R	7,87,29,237.14	7,46,98,381.29	8,25,84,901.88	+4.89% ಹೆಚ್ಚು	+10.56% ಹೆಚ್ಚು	L1
02	C R GIRISH (RAM AND COMPANY)			8,70,77,750.61	+10.60% ಹೆಚ್ಚು	+16.57% ಹೆಚ್ಚು	L2

ಸದರಿ ಟೆಂಡರ್‌ನಲ್ಲಿ ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾದ Chidananda Murthy R ರವರು ರೂ.8,25,84,901.88 ಗಳನ್ನು ನಮೂದಿಸಿರುತ್ತಾರೆ. ಈ ಮೊತ್ತವನ್ನು ಕರ್ನಾಟಕ ಲೋಕೋಪಯೋಗಿ 2021-22ನೇ ದರಪಟ್ಟಿ ದರಗಳಿಗೆ ಹೋಲಿಸಿದಾಗ ಶೇಕಡ (+) 4.89% ಹೆಚ್ಚು ಇದ್ದು, ದಿನಾಂಕ: 07-07-2022 ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡ (+) 10.56% ರಷ್ಟು ಹೆಚ್ಚಾಗಿರುತ್ತದೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಎಲ್-1 ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಿದ್ದು, ವಿವರ ಈ ಕೆಳಕಂಡಂತಿರುತ್ತದೆ ಎಂದು ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ., ರವರು ತಿಳಿಸಿರುತ್ತಾರೆ.

. . .3/-

Scanned by CamScanner

	BEFORE NEGOTIATION				AFTER NEGOTIATION		
ಕ್ರ. ಸಂ.	ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಗುತ್ತಿಗೆದಾರರು ನಮೂದಿಸಿರುವ ದರಗಳು	ಟೆಂಡರ್‌ಗಿಟ್ಟ ಮೊತ್ತ 2021-22 ರ ಅನುಮೋದಿತ ದರಗಳಿಗೆ ಹೊಲಿಸಿದಾಗ ಶೇಕಡವಾರು	ಟೆಂಡರ್‌ಗಿಟ್ಟ ಮೊತ್ತ 07-07-2022 ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡವಾರು	ದರ ಸಂದಾನದ ನಂತರ ಗುತ್ತಿಗೆದಾರರು ನಮೂದಿಸಿರುವ ಮೊತ್ತ	ಟೆಂಡರ್‌ಗಿಟ್ಟ ಮೊತ್ತ 2021-22 ರ ಅನುಮೋದಿತ ದರಗಳಿಗೆ ಹೊಲಿಸಿದಾಗ ಶೇಕಡವಾರು	ಟೆಂಡರ್‌ಗಿಟ್ಟ ಮೊತ್ತ 07-07-2022 ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡವಾರು
01	Chidananda Murthy R	8,25,84,901.88	+4.89% ಹೆಚ್ಚು	+10.56% ಹೆಚ್ಚು	7,84,18,360.68	-0.39% ಕಡಿಮೆ	+4.98 ಹೆಚ್ಚು

ಮೇಲ್ಕಂಡ ವಿವರಗಳಂತೆ ಎಲ್-1 ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಿದ್ದು, ದರ ಸಂಧಾನದ ನಂತರ ರೂ.7,84,18,360.68 ಗಳಾಗಿದ್ದು, ಈ ಮೊತ್ತವನ್ನು ಕರ್ನಾಟಕ ಲೋಕೋಪಯೋಗಿ 2021-22ನೇ ದರಪಟ್ಟಿ ದರಗಳಿಗೆ ಹೋಲಿಸಿದಾಗ ಶೇ(-) 0.39% ರಷ್ಟು ಕಡಿಮೆ ಇದ್ದು, ದಿನಾಂಕ: 07-07-2022 ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡ (+)4.98% ರಷ್ಟು ಹೆಚ್ಚಾಗಿರುತ್ತದೆ.

ಅದರಂತೆ ದಿನಾಂಕ: 10-08-2022 ರಂದು ನಡೆದ ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂದಾನ ಸಮಿತಿ ಸಭೆಯಲ್ಲಿ ಚರ್ಚಿಸಿದಂತೆ ಇತ್ತೀಚೆಗೆ ರಸ್ತೆ ಮತ್ತು ಕಟ್ಟಡ ಕಾಮಗಾರಿಗೆ ಸಂಬಂದಿಸಿದ ದರಗಳು ಕಡಿಮೆಯಾಗಿರುವುದರಿಂದ ಲೋಕೋಪಯೋಗಿ ಇಲಾಖೆಯಿಂದ ದಿನಾಂಕ: 07-07-2022 ರಂದು ಹೊರಡಿಸಿರುವ ಪರಿಷ್ಕೃತ ದರಗಳಿಗೆ ಶೇಕಡ 5% ರಷ್ಟು ಹೆಚ್ಚು ಟೆಂಡರ್ ಪ್ರೀಮಿಯಂ ನೀಡಲು ತಿರ್ಮಾನಿಸಲಾಯಿತು. ಅದರಂತೆ ಟೆಂಡರ್‌ನ ಮೊತ್ತವು ರೂ.7,84,18,360.68 ಗಳಿಗೆ ಟೆಂಡರ್ ಅನುಮೋದಿಸಲು ಶಿಪಾರಸ್ಸು ಮಾಡಲಾಗಿರುತ್ತದೆ.

ಆದುದರಿಂದ ಮೇಲ್ಕಂಡ ಕಾಮಗಾರಿಯನ್ನು ವಾರ್ಡ್ ನಂ-09 ರ ವ್ಯಾಪ್ತಿಯಲ್ಲಿ ಕೈಗೊಂಡು ನಿರ್ವಹಿಸಬೇಕಾಗಿರುವುದರಿಂದ ರೂ. 900.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಕಡಿಮೆ ಮೊತ್ತದ ಟೆಂಡರ್‌ದಾರರಾದ Sri. Chidananda Murthy R ರವರ ಟೆಂಡರ್‌ನ ಮೊತ್ತ ರೂ.7,84,18,360.68 ಗಳ ಶೇಕಡ (-) 0.39% ಕಡಿಮೆ ದರಗಳಿಗೆ ದರಗಳಿಗೆ ಟೆಂಡರ್ ಅನುಮೋದನೆ ನೀಡುವಂತೆ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ., ಇವರು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ದಿನಾಂಕ: 20-08-2022 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ಮುಂದೆ ಬಿ.ಬಿ.ಎಂ.ಪಿ. ಮುಖ್ಯ ಆಯುಕ್ತರ ದಿನಾಂಕ: 11-08-2022ರ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ, ವಿಷಯವನ್ನು ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

"ವಿವರವಾದ ಚರ್ಚೆಯ ನಂತರ, "Package No.04 (Consists of 3 Works)" ಯೋಜನೆಯ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ, Chidananda Murthy.R. ರವರ ಬಿಡ್ಡನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.7,87,29,237.14 ಗಳಿಗೆ ಹೋಲಿಸಿದಾಗ ಶೇಕಡ -0.39% ರಷ್ಟು ಕಡಿಮೆ ಮತ್ತು ದಿನಾಂಕ:07.07.2022 ರಿಂದ ಜಾರಿಯಲ್ಲಿರುವ 2021-22ನೇ ಸಾಲಿನ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡ +4.98 ರಷ್ಟು ಹೆಚ್ಚು ಇರುವ ಅಂದರೆ, ರೂ.7,84,18,360.00 ಗಳ ಸಂಧಾನಿತ ಮೊತ್ತಕ್ಕೆ

. . .4/-

Scanned by CamScanner

ಅನುಮೋದಿಸಲು ಮತ್ತು ರೂ.10 ಕೋಟಿಗಿಂತ ಕಡಿಮೆ ಇರುವ ಮೊತ್ತದ ಪ್ಯಾಕೇಜ್ ರೂಪಿಸಿ ಟೆಂಡರ್ ಕರೆದಿರುವ ಕ್ರಮವನ್ನು, ಸಂಬಂಧಪಟ್ಟ ಮುಖ್ಯ ಅಭಿಯಂತರರು ನೀಡಿದ ವಿವರಣೆಯನ್ನು ಪರಿಗಣಿಸಿ ಸ್ಥಿರೀಕರಣಕ್ಕಾಗಿ, ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆಗೆ ಸಲ್ಲಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು."

ದಿನಾಂಕ: 20-08-2022 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ನಅಇ 470 ಎಂಎನ್‌ಪೈ 2022 (ಇ),
ಬೆಂಗಳೂರು, ದಿನಾಂಕ: 13-10-2022.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 206 ಎಂಎನ್‌ವೈ 2022 (ಇ), ದಿನಾಂಕ: 18-05-2022 ರಂತೆ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಯಡಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರಕ್ಕೆ ರೂ.75.00 ಕೋಟಿಗಳ ಅಂದಾಜು ಮೊತ್ತದ ಕಾಮಗಾರಿಗಳ ಕ್ರಿಯಾಯೋಜನೆ ಪಟ್ಟಿಗೆ ಕೆಲವು ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಿದ್ದು, ಸದರಿ ಆದೇಶದ ಕ್ರಮ ಸಂಖ್ಯೆ: 15, 16 ಮತ್ತು 17ರ ಒಟ್ಟು 03 ಕಾಮಗಾರಿಗಳನ್ನು ಒಗ್ಗೂಡಿಸಿ ಮಾಡಲಾಗಿರುವ "Package No.04 (Consists of 3 Works)" ಪ್ಯಾಕೇಜಿನ ರೂ.9.00 ಕೋಟಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ, ದಿನಾಂಕ: 20-08-2022 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ, Chidananda Murthy.R. ರವರ ಬಿಡ್ಡನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.7,87,29,237.14 ಗಳಿಗೆ ಹೋಲಿಸಿದಾಗ ಶೇಕಡ -0.39% ರಷ್ಟು ಕಡಿಮೆ ಮತ್ತು ದಿನಾಂಕ: 07-07-2022 ರಿಂದ ಜಾರಿಯಲ್ಲಿರುವ 2021-22ನೇ ಸಾಲಿನ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡ +4.98 ರಷ್ಟು ಹೆಚ್ಚು ಇರುವ ಅಂದರೆ, ರೂ.7,84,18,360.00 (ಏಳು ಕೋಟಿ ಎಂಭತ್ತನಾಲ್ಕು ಲಕ್ಷದ ಹದಿನೆಂಟು ಸಾವಿರದ ಮೂರುನೂರ ಅರವತ್ತು ರೂಪಾಯಿಗಳು ಮಾತ್ರ) ಗಳ ಸಂಧಾನಿತ ಮೊತ್ತಕ್ಕೆ ಮಿತಿಗೊಳಿಸಿ ಟೆಂಡರ್‌ಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮೋದನೆಯನ್ನು ನೀಡಿದೆ.

ಷರತ್ತುಗಳು:

1. ಕಾಮಗಾರಿಗಳಿಗೆ ಅನುಮೋದನೆ ನೀಡಿರುವ ಟೆಂಡರ್ ಮೊತ್ತಕ್ಕೆ ಬಿಡ್‌ದಾರರು ಒಪ್ಪದ ಪಕ್ಷದಲ್ಲಿ ಮರು ಟೆಂಡರ್ ಕರೆಯುವುದು.
2. ಮೇಲಿನ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ / ನಿಯಮಗಳು ಹಾಗೂ ಎಲ್ಲಾ ಚಾಲ್ತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿರುವುದನ್ನು ಬಿಬಿಎಂಪಿ ಮುಖ್ಯ ಆಯುಕ್ತರು ಖಚಿತಪಡಿಸಿಕೊಂಡು ಅನುಷ್ಠಾನಗೊಳಿಸುವುದು.
3. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021(ಇ), ದಿನಾಂಕ: 25-02-2022(5) ರಲ್ಲಿ ಹಾಗೂ ಸರ್ಕಾರದ ಆದೇಶ ಸಂಖ್ಯೆ: ನಅಇ 206 ಎಂಎನ್‌ವೈ 2022 (ಇ) ದಿನಾಂಕ: 18-05-2022 ರಲ್ಲಿ ಮೀಸಲಿಟ್ಟಿರುವ ಅನುದಾನದಲ್ಲಿ ಭರಿಸುವುದು.
4. ಮೇಲಿನ ಕಾಮಗಾರಿಯನ್ನು ಸರ್ಕಾರದಿಂದ ಮಂಜೂರಾದ ಮೊತ್ತದ ಮಿತಿಯಲ್ಲಿಯೇ ಯಾವುದೇ ಹೆಚ್ಚುವರಿಯಾಗದಂತೆ ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು ಹಾಗೂ ಹೆಚ್ಚುವರಿ ಟೆಂಡರ್ ಪ್ರೀಮಿಯಂ ಅನ್ನು ಬಿಬಿಎಂಪಿಯ ಸ್ವಂತ ಸಂಪನ್ಮೂಲದಿಂದ ಭರಿಸತಕ್ಕದ್ದು.

. . .5/-

Scanned by CamScanner

5. ಕರ್ನಾಟಕ ಆರ್ಥಿಕ ಸಂಹಿತೆ 1958 ಸಾಧಿಲ್ವಾರು ವೆಚ್ಚ ಕೈಪಿಡಿ ಅಧಿನಿಯಮ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಕಾಯ್ದೆ ನಿಯಮಗಳನುಸಾರ ಕ್ರಮವಹಿಸತಕ್ಕದ್ದು.
6. ಸರ್ಕಾರವು ಕಾಮಗಾರಿಗಳಿಗೆ ಆಡಳಿತಾತ್ಮಕ ಮತ್ತು ಟೆಂಡರ್‌ಗಳಿಗೆ ಅನುಮೋದನೆ ನೀಡಿದ್ದಾಗ್ಯೂ ಸಹ ಕಾಮಗಾರಿಯು ಪುನರಾವರ್ತನೆ ಆಗದಂತೆ ನೋಡಿಕೊಳ್ಳತಕ್ಕದ್ದು. ಅನುಮೋದನೆಗೊಂಡಿರುವ ಕಾಮಗಾರಿಯನ್ನಲ್ಲದೆ ಯಾವುದೇ ಕಾರಣಕ್ಕೆ ಬೇರೆ ಕಾಮಗಾರಿಗಳನ್ನು ಕೈಗೊಳ್ಳಬಾರದು.
7. ಮೇಲಿನ ಕಾಮಗಾರಿಗೆ 3rd Party Quality Monitors ಗಳನ್ನು ನೇಮಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.
8. ದಿನಾಂಕ: 20–08–2022ರ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಯಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಹಾಗೂ ನಿಬಂಧನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.
9. ಸದರಿ ಬಿಡ್ದುದಾರರು ಅಥವಾ ಇನ್ಯಾವುದೇ ಹಂತದಲ್ಲಿ ತಪ್ಪು ಮಾಹಿತಿ / ದಾಖಲೆ ನೀಡಿರುವುದು ಕಂಡುಬಂದಲ್ಲಿ ಟೆಂಡರ್‌ಅನ್ನು ರದ್ದುಪಡಿಸಲು ಬಿಬಿಎಂಪಿ ಮುಖ್ಯ ಆಯುಕ್ತರು ನಿಯಮಾನುಸಾರ ಕ್ರಮ ವಹಿಸುವುದು.
10. ರೂ.10.00 ಕೋಟಿಗಿಂತ ಕಡಿಮೆ ಪ್ಯಾಕೇಜ್‌ಗಳಲ್ಲಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸೂಕ್ತ ಸಮರ್ಥನೆ ಮತ್ತು ಸ್ಪಷ್ಟೀಕರಣಗಳನ್ನು ಪಡೆಯತಕ್ಕದ್ದು. ಇನ್ನು ಮುಂದೆ ಸೂಕ್ತ ಸಮರ್ಥನೆ ಇಲ್ಲದೆ ರೂ.10.00 ಕೋಟಿಗಿಂತ ಕಡಿಮೆ ಪ್ಯಾಕೇಜ್‌ಗಳಲ್ಲಿ ಕಾಮಗಾರಿಗಳನ್ನು ಪ್ರಸ್ತಾಪಿಸದಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಕ್ಷ್ಮೀಸಾಗರ್ ಎನ್.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

13/10

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

Scanned by CamScanner